# ಸುನೀಲ್ ಅಗ್ರೋ ಫುಡ್ಸ್ ಲಿಮಿಟೆಡ್

CIN: L01111KA1988PLC008861
ನೋಂ. ಕಚೇರಿ: ಪ್ಲಾಟ್ ನಂ. 39–ಎ2, ಕೈಗಾರಿಕಾ ಪ್ರದೇಶ, ಚೊಕ್ಕಹಳ್ಳಿ, ಹೊಸಕೋಟೆ
ಕರ್ನಾಟಕ, 562 114, ದೂರವಾಣಿ: +91– 80– 27971371/ 27971463
ಈಮೇಲ್: info@sunilagro.in, ವೆಬ್‌ಸೈಟ್: http://www.sunilagro.in

## ಶೇರುದಾರರಿಗೆ 36ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಈ ಮೂಲಕ ನೋಟೀಸು ನೀಡಲಾಗುತ್ತಿದೆ, ಏನೆಂದರೆ: 28ನೇ ಆಗಸ್ಟ್ 2024ರ ದಿನಾಂಕದ ನೋಟೀಸಿನಲ್ಲಿ ತಿಳಿಸಲಾಗಿರುವ ಕ್ರಮದಂತೆ ವ್ಯವಹಾರವನ್ನು ನಡೆಸುವ ಸಲುವಾಗಿ ಕಂಪನಿಯ ಮೂವತ್ತಾರನೆಯ (36ನೇ) ವಾರ್ಷಿಕ ಸಾಮಾನ್ಯ ಸಭೆಯನ್ನು (ಎಜಿಎಮ್) ಬುಧವಾರ, 25ನೇ ಸೆಪ್ಟೆಂಬರ್, 2024ರಂದು ಮಧ್ಯಾಹ್ನ 12:30ಕ್ಕೆ, ವಿಡಿಯೋ ಕಾನ್ಫರೆನ್ (ವಿ.ಸಿ.) ಇಲ್ಲವೆ ಇತರ ಆಡಿಯೋ ವಿಷುಯಲ್ ಮಾರ್ಗದಿಂದ (ಓಎವಿಎಮ್) ನಡೆಸಲಾಗುವುದು. ಯಾವ ಸದಸ್ಯರ ಈಮೇಲ್‌ಗಳು ಕಂಪನಿಯೊಂದಿಗೆ/ ಡಿಪಾಸಿಟರಿಗಳೊಂದಿಗೆ ನೋಂದಾಯಿತವಾಗಿವೆಯೋ ಅವರಿಗೆ ಎಜಿಎಮ್‌ನ ನೋಟೀಸನ್ನು ಕಂಪನಿಯು 31ನೇ ಆಗಸ್ಟ್ 2024ರಂದು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಕಳಿಸಿಕೊಟ್ಟಿದೆ; ಇದು ಮೇ 5, 2020ನೇ ದಿನಾಂಕದ ಸುತ್ತೋಲೆಯನ್ನು ಏಪ್ರಿಲ್ 8, 2020ರ ಹಾಗೂ ಅನಂತರ ಈ ಕುರಿತಂತೆ ಹೊರಡಿಸಲಾದ ಇತರ ಎಲ್ಲ ಸುತ್ತೋಲೆಗಳ ಅನುಸಾರ, ಇದರಲ್ಲಿ ಇತ್ತೀಚಿನದೆಂದರೆ ದಿನಾಂಕ ಸೆಪ್ಟೆಂಬರ್ 25, 2023ರ ನಂ. 09/2023 (ಒಟ್ಟಾಗಿ 'ಎಂಸಿಎ ಸುತ್ತೋಲೆಗಳು' ಎಂದು ಕರೆಯಲಾಗಿದೆ) ಇವುಗಳೊಂದಿಗೆ ಓದಿಕೊಂಡಂತೆ, ಮತ್ತು ಸೆಬಿಯು ಹೊರಡಿಸಿರುವ ಸುತ್ತೋಲೆಗಳಾದ ಮೇ 12, 2020ನೇ ದಿನಾಂಕದ ಸುತ್ತೋಲೆ ಸಂ. SEBI/HO/CFD/CMD1/CIR/P/2020/79, ಇದನ್ನು ಜನವರಿ 15, 2021ರ ಸುತ್ತೋಲೆ SEBI/HO/CFD/CMD2/CIR/P/2021/11, ಮೇ 13, 2022ರ SEBI/HO/CFD/CMD2/CIR/P/2022/62, ಮತ್ತು ಜನವರಿ 5, 2023ರ SEBI/HO/CFD/PoD-2/P/CIR/2023/4, ಹಾಗೂ ಅಕ್ಟೋಬರ್ 07, 2023ರ SEBI/HO/CFD/PoD-2/P/CIR/2023/167 ಇವುಗಳ ಅನುಸಾರ ಹೊರಡಿಸಲಾಗಿದೆ.

ಕಂಪನಿಯು ಎಜಿಎಮ್‌ಗಾಗಿ ವಿ.ಸಿ./ಓಎವಿಎಮ್ ಸೌಲಭ್ಯವನ್ನು ಒದಗಿಸಲು ಮತ್ತು ಎಲೆಕ್ಟ್ರಾನಿಕ್ ಮಾರ್ಗವಾಗಿ ಮತದಾನ ಮಾಡಲು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ನೇಮಿಸಿದೆ. ಡಿಮ್ಯಾಟ್ ರೂಪದಲ್ಲಿ ಶೇರುಗಳನ್ನು ಹೊಂದಿರುವ ಶೇರುದಾರರು, ತಮ್ಮ ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರ ಮುಖಾಂತರ ತಮ್ಮ ಡಿಪಾಸಿಟರಿಗಳಲ್ಲಿ ತಮ್ಮ ಈಮೇಲ್ ವಿಳಾಸ ಮತ್ತು ಫೋನ್ ನಂಬರನ್ನು ನೋಂದಾಯಿಸಿಕೊಳ್ಳಲು ವಿನಂತಿಸುತ್ತಿದ್ದೇವೆ. ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವ ಶೇರುದಾರರು ತಮ್ಮ ಈಮೇಲ್ ವಿಳಾಸ ಮತ್ತು ಫೋನ್ ನಂಬರನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರು ವರ್ಗಾವಣೆ ಏಜೆಂಟರಾದ (ಆರ್‌ಟಿಎ) ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, irg@integratedindia.in ಇವರಿಗೆ ಸಲ್ಲಿಸಬೇಕೆಂದು ಕೋರಿದೆ. 36ನೇ ಎಜಿಎಮ್‌ನ ನೋಟೀಸನ್ನು ಹಾಗೂ 2023–24ನೇ ಸಾಲಿನ ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟಾದ www.sunilagro.in, ಬಿಎಸ್‌ಇ ಲಿಮಿಟೆಡ್‌ನ www.bseindia.com ಹಾಗೂ ಸಿಡಿಎಸ್‌ಎಲ್‌ನ www.evotingindia.com ವೆಬ್‌ಸೈಟುಗಳಲ್ಲಿ ಕೂಡ ಪ್ರಕಟಿಸಲಾಗುವುದು.

ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯು 22ನೇ ಸೆಪ್ಟೆಂಬರ್ 2024ರಂದು (ಬೆಳಿಗ್ಗೆ 9:00 ಗಂಟೆಗೆ) ಶುರುವಾಗಿ, 24ನೇ ಸೆಪ್ಟೆಂಬರ್ 2024ರಂದು (ಸಂಜೆ 5 ಗಂಟೆಗೆ) ಕೊನೆಗೊಳ್ಳುತ್ತದೆ. ಇ–ವೋಟಿಂಗ್ ಮಾಡ್ಯೂಲ್‌ಅನ್ನು ಸಿಡಿಎಸ್‌ಎಲ್ ತದನಂತರ ನಿಷ್ಕ್ರಿಯಗೊಳಿಸುತ್ತದೆ. ವಿ.ಸಿ./ಓಎವಿಎಮ್ ಸೌಲಭ್ಯದ ಮುಖಾಂತರ ಎಜಿಎಮ್‌ನಲ್ಲಿ ಹಾಜರಿರುವ ಮತ್ತು ನಿರ್ಣಯಗಳ ಮೇಲೆ ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತಗಳನ್ನು ಚಲಾಯಿಸಿಲ್ಲದ ಹಾಗೂ ಹಾಗೆ ಮಾಡದಂತೆ ಯಾವುದೇ ಕಾರಣದಿಂದ ತಡೆಯಲ್ಪಟ್ಟಿಲ್ಲದ ಸದಸ್ಯರು, ಎಜಿಎಮ್‌ನ ಸಮಯದಲ್ಲಿ ಇ–ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಇ–ವೋಟಿಂಗ್ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ ನಂತರವೂ ಸದಸ್ಯರು ಸಭೆಯಲ್ಲಿ ಭಾಗವಹಿಸಬಹುದು, ಆದರೆ ಸಭೆಯಲ್ಲಿ ಮನಃ ಮತಚಲಾಯಿಸಲು ಅವಕಾಶ ಇರುವುದಿಲ್ಲ. ರಿಮೋಟ್ ವಿ–ವೋಟಿಂಗ್ ಹಾಗೂ ಎಜಿಎಮ್‌ನಲ್ಲಿ ಇ–ವೋಟಿಂಗ್ ಕುರಿತಂತೆ ಸವಿವರವಾದ ಪ್ರಕ್ರಿಯೆಯನ್ನು ಹಾಗೂ ಸೂಚನೆಯನ್ನು 36ನೇ ಎಜಿಎಮ್‌ನ ನೋಟೀಸಿನಲ್ಲಿ ನೀಡಲಾಗಿದೆ.

ಎಜಿಎಮ್‌ನ ಸಲುವಾಗಿ ಕಂಪನಿಯ ಸದಸ್ಯರ ರಿಜಿಸ್ಟರ್ ಹಾಗೂ ಶೇರು ವರ್ಗಾವಣೆ ಪುಸ್ತಕಗಳು ಗುರುವಾರ 19ನೇ ಸೆಪ್ಟೆಂಬರ್ 2024ರಿಂದ ಬುಧವಾರ 25ನೇ ಸೆಪ್ಟೆಂಬರ್ 2024ರವರೆಗೆ (ಎರಡೂ ದಿನಗಳು ಸೇರಿದಂತೆ) ಮುಚ್ಚಿರುತ್ತವೆ.

ಎಜಿಎಮ್ ನೋಟೀಸಿನಲ್ಲಿ ತಿಳಿಸಲಾದಂತೆ ವ್ಯವಹಾರದ ಬಗ್ಗೆ ತಮ್ಮ ಮತವನ್ನು ಎಲೆಕ್ಟ್ರಾನಿಕ್ ಮತಚಲಾವಣೆಯ ಮೂಲಕ 'ರಿಮೋಟ್' ವಿಧಾನದಲ್ಲಿ ಚಲಾಯಿಸಲು ಶೇರುದಾರರಿಗೆ ಒಂದು ಅವಕಾಶವಿರುತ್ತದೆ. ಇದಲ್ಲದೆ, ಎಜಿಎಮ್‌ನ ಸಮಯದಲ್ಲಿ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮತದಾನದ ಸೌಲಭ್ಯವನ್ನೂ ಕಲ್ಪಿಸುತ್ತಿದೆ. ಶೇರುಗಳನ್ನು ಡಿಮ್ಯಾಟ್ ರೂಪದಲ್ಲಿ, ಭೌತಿಕ ರೂಪದಲ್ಲಿ ಹೊಂದಿರುವ ಹಾಗೂ ತಮ್ಮ ಈಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರದ ಶೇರುದಾರರು 'ರಿಮೋಟ್' ವಿಧಾನದಲ್ಲಿ ಮತದಾನ ಮಾಡಬೇಕಾದ ಕ್ರಮವನ್ನು ಶೇರುದಾರರಿಗೆ ಕಳಿಸಿದ ನೋಟೀಸಿನಲ್ಲಿ ತಿಳಿಸಲಾಗಿದೆ.

ಸುನೀಲ್ ಅಗ್ರೋ ಫುಡ್ಸ್ ಲಿಮಿಟೆಡ್‌ಗಾಗಿ
ಶೈಲಾ ಎ ಬಿ
ಕಂಪನಿ ಸೆಕ್ರೆಟರಿ
(M. No: A73126)

ಸ್ಥಳ: ಬೆಂಗಳೂರು
ದಿನಾಂಕ: 2ನೇ ಸೆಪ್ಟೆಂಬರ್, 2024